ಹುಡುಗಿ ಶವ ಯಾರದ್ದು? ಅದು ಇಲ್ಲಿಗೇ ಹೇಗೆ ಬಂತು? ಈಗ ಹೋಗಿದ್ದಾದರೂ ಎಲ್ಲಿಗೆ? ಈ ಎಲ್ಲಾ ಪ್ರಶ್ನೆಗಳಿಗೆ ವಿಭಾಗದ ಮುಖ್ಯಸ್ಥರಾದ ನೀವೇ ಉತ್ತರ ಕೊಡಬೇಕಾಗಿದೆ...' ಕುಲಕರ್ಣಿ ನೇರವಾಗಿ ಗಂಭೀರವಾಗಿ ಇಳಂಗೋವನ್ ಅವರನ್ನೇ ನೋಡುತ್ತಾ ಕೇಳಿದರು.

ಇಳಂಗೋವನ್ ನಿರ್ವಿಣ್ಣರಾದರು. ಮುಖದ ಮೇಲೆ ಬೆವರು ಮೂಡಿತು. ತುಟಿಗಳು ಕಂಪಿಸುತ್ತಿದ್ದವು. ಬಾಯಿ ಒಣಗಿ ಬಂದಂತಾಗಿ ಎದುರಿಗಿದ್ದ ನೀರಿನ ಲೋಟವನ್ನೆತ್ತಿ ಗಟಗಟನೆ ನೀರು ಕುಡಿದರು.

ಇನ್‌ಸ್ಪೆಕ್ಟರ್ ಕುಲಕರ್ಣಿ ಅವರನ್ನು ದಿಟ್ಟಿಸಿ ನೋಡುತ್ತಾ ಕುಳಿತಿದ್ದರು. ಸಾವರಿಸಿಕೊಂಡ ಪ್ರೊಫೆಸರ್ ಇಳಂಗೋವನ್, 'ವಿಭಾಗದ ಮುಖ್ಯಸ್ಥನಾದ ಮಾತ್ರಕ್ಕೆ ಎಲ್ಲದಕ್ಕೂ ನಾನ್ಹೇಗೆ ಜವಾಬ್ದಾರನಾಗ್ತೇನೆ. ಬೇರೆ ಯಾರಾದರೂ ಮಾಡಿರಬಹುದಲ್ಲ?' ಎಂದರು ತಮ್ಮನ್ನು ತಾವು ಸಮರ್ಥಿಸಿಕೊಂಡರೂ ಕಂಪನ ನಿಂತಿರಲಿಲ್ಲ.

'ನೀವು ಒಂದು ಸೊಳ್ಳೆಯನ್ನೂ ಕೂಡ ಒಳಗೆ ಬಿಡಲಾರಿರೀಂತ ಎಲ್ಲರಿಗೂ ಗೊತ್ತು. ಅಂತಹುದರಲ್ಲಿ ಬೇರೆ ಯಾರು ಬರಬಹುದು? ಬೇರೆಯವರು ಬಂದು ಯುವತಿಯೊಬ್ಬಳ ಶವವನ್ನು ತಂದು ನಿಮ್ಮ ವಿಭಾಗದ ಆ ಟ್ಯಾಂಕ್‌ನಲ್ಲಿ ಹೇಗೆ ಹಾಕಿ ಹೋಗಲು ಸಾಧ್ಯ?'

'.....'

'ಇನ್ನೊಂದು ಸಾಕ್ಷಿ ತೋರಿಸುತ್ತೇನೆ. ನೋಡಿ ಈ ಮೊಬೈಲ್ ಫೋನು ಗುರುತಿಸುತ್ತೀರಾ?' ಎನ್ನುತ್ತಾ ಕುಲಕರ್ಣಿಯವರು ಬಟ್ಟೆಯಲ್ಲಿ ಸುತ್ತಿಟ್ಟುಕೊಂಡಿದ್ದ ಮೊಬೈಲ್ ಫೋನನ್ನು ತೋರಿಸಿದರು. ಪ್ರೊಫೆಸರ್ ಕಣ್ಣರಳಿಸಿ ನೋಡಿದರು. ಭಯ, ಗಾಬರಿಯಿಂದ ಅವರ ಮುಖ ವಿಕಾರವಾಗಿ ಕಂಡಿತು.

'ಇದರಿಂದಾಗಲೆ ಫಿಂಗರ್ ಪ್ರಿಂಟ್ಸ್ ತೆಗೆದುಕೊಂಡಿದ್ದೇವೆ... ಅದಕ್ಕೆ ಬ್ಯಾಟರಿ ಇರಲಿಲ್ಲ, ನಾವು ಹಾಕಿಸಿದೆವು. ಸಿಮ್ ಕಾರ್ಡ್ ಇದ್ದ ಭಾಗ ಒಡೆದಿರಲಿಲ್ಲ ಸದ್ಯ...' ಎಂದು ಹೇಳುತ್ತಿದ್ದ ಕುಲಕರ್ಣಿಯವರ ಹೇಳಿಕೆಯನ್ನು ಅರ್ಧ ತಡೆದ ಇಳಂಗೋವನ್,

'ಅದು ನಾನು ಬೀಸಿ ಎಸೆದ ರಭಸಕ್ಕೆ ಚೂರು ಚೂರಾಗಿದೆ ಎಂದುಕೊಂಡಿದ್ದೆ. ಅದನ್ನು ಎಸೆಯುವಾಗ ನಾನು ಅಮಲಿನಲ್ಲಿದ್ದೆ... ಆಮೇಲೆ ಮ್ಯೂಸಿಯಂ ಅನಾಟಮಿಹಾಲನ್ನು ಕ್ಲೀನ್ ಮಾಡಿಸಿ ಪೇಯಿಂಟ್ ಕೂಡಾ ಮಾಡಿಸಿದ್ದೆ...' ಕಾತರ, ಗಾಬರಿಯಿಂದ ಹೇಳಿದರು. ಆತಂಕ, ಉದ್ವೇಗದಲ್ಲಿ ಅವರು ತಮ್ಮ ಅರಿವಿಗೆ ಬಾರದೆ ಹೇಳಿಬಿಟ್ಟರು.

ಕುಲಕರ್ಣಿಯವರ ತುಟಿಗಳಲ್ಲಿ ವಿಜಯದ ನಗು ಸುಳಿಯಿತು. 'ಸರಿ, ಹೇಳಿ ಮುಗಿಸಿ ಬಿಡಿ. ಸಾಕ್ಷಿಯನ್ನು ಯಾಕೆ ಕೊಲೆ ಮಾಡಿ ಫಾರ್ಮಾಲಿನ್ ಟ್ಯಾಂಕ್‌ನಲ್ಲಿ ಹಾಕಿದಿರಿ? ನಂತರ ಆ ಶವವನ್ನು ಎಲ್ಲಿ ಹೂತು ಹಾಕಿದಿರಿ ಎಂದು ಹೇಳಿದರೆ ಈ ಪ್ರಕರಣ ಮುಗಿದು ಹೋಗುತ್ತದೆ...' ಕುಲಕರ್ಣಿಯವರು ಗಂಭೀರವಾಗಿ ಹೇಳಿ, ವಿಡಿಯೊ ರೆಕಾರ್ಡ್ ಮಾಡಲು ತಮ್ಮ ಸಿಬ್ಬಂದಿಯೊಬ್ಬನಿಗೆ ಸೂಚಿಸಿದರು.

ಪ್ರೊಫೆಸರ್ ಇಳಂಗೋವನ್ ಸಿಕ್ಕಿ ಹಾಕಿಕೊಂಡಿದ್ದರು. ಒಪ್ಪಿಕೊಳ್ಳದೇ ಬೇರೆ ದಾರಿಯೇ ಇರಲಿಲ್ಲ!

'ವೀಕೆಂಡ್‌ನಲ್ಲಿ ನನ್ನ ದಿನಗಳನ್ನು ನನ್ನ ಛೇಂಬರ್‌ನಲ್ಲಿ ಕಳೆಯುತ್ತೇನೆ. ಮದ್ಯಪಾನ, ವ್ಯಭಿಚಾರ... ಎಲ್ಲವೂ ನಡೆಸುತ್ತಿದ್ದೆ. ಸಂಜೆಯಾದರೆ ಆ ಕಡೆ ಯಾರೂ ಸುಳಿಯುವುದಿಲ್ಲ, ಬೇರೆಯವರಿಗೆ ತಿಳಿಯುವುದೂ ಇಲ್ಲಾಂತ ಧೈರ್ಯವಿತ್ತು... ಕಾಲ್‌ಗರ್ಲ್ಸ್‌ಗಳು ಬಂದು ಹೋಗುತ್ತಿದ್ದರು. ಅದನ್ನೆಲ್ಲಾ ಡಿಪಾರ್ಟ್‌ಮೆಂಟಿನ ರೂಮಿನಲ್ಲೇ ನಡೆಸುತ್ತಿದ್ದುದು ತಪ್ಪು, ಅಪರಾಧವೆಂದು ಗೊತ್ತಿತ್ತು. ಹೀಗಾಗಿ ಆತಂಕವೂ ಇರುತ್ತಿತ್ತು...'

'.....'

'ಆದರೆ ಆ ದಿನ ಆ ಹುಡುಗಿ ಅಂದರೆ ಡಾಕ್ಟರ್ ಸಾಕ್ಷಿ ಹೇಗೋ ಏನೋ ಒಳಗೆ ಬಂದು